ಶ್ರೀ ಕೆ.ಎಸ್. ಈಶ್ವರಪ್ಪ:- 6 ಕೋಟಿಯಷ್ಟು ಹೆಚ್ಚು ಹಣ ಬಿಡುಗಡೆ ಮಾಡುತ್ತೇವೆಂದು ಹೇಳುತ್ತಿದ್ದೀರಿ, ಸರಕಾರ ಇದಕ್ಕೆ ಒಪ್ಪಿದೆ ಎಂದು ಹೇಳುತ್ತಿದ್ದೀರಿ. ಇದರಿಂದ ನಗರಸಭೆ, ಪುರಸಭೆ ಪಾಲೇನು ಇದೆ ಆ ಪಾಲನ್ನು ಅದಕ್ಕೇನಾದರೂ ವಿನಾಯಿತಿ ಕೊಟ್ಟು ಪೂರ್ಣ ಹಣವನ್ನು ರಾಜ್ಯ ಸರಕಾರದಿಂದ ಭರಿಸುವಂತಹ ಕೆಲಸ ಮಾಡುತ್ತೀರೋ?

ಶ್ರೀ ಬಿ.ಎನ್. ಬಚ್ಚೇಗೌಡ:- ಆ ಬಗ್ಗೆ ನಗರ ಸಭೆ ಪುರಸಭೆಗಳಿಗೆ ಸಮಗ್ರವಾಗಿ ಈ ರಾಜ್ಯದಲ್ಲಿ ಏಕ ರೂಪ ನೀರಿನ ದರವನ್ನು ಕೊಡಬೇಕು ಈಗಿರುವ ಜನಸಂಖ್ಯೆಯ ಆಧಾರದ ಮೇಲೆ ಮಹಾರಾಷ್ಟ್ರವನ್ನು ಅನುಸರಿಸಿ 50 ಸಾವಿರದವರೆಗೆ ಉಚಿತವಾಗಿ ಕೊಡುವ ವ್ಯವಸ್ಥೆ 50 ಸಾವಿರದಿಂದ ಲಕ್ಷಕ್ಕೆ ಇದ್ದರೆ ಹತ್ತು ಭಾಗ ಕೊಡುವಂಥಾದ್ದು ಅದಕ್ಕೆ ಹೆಚ್ಚು ಇದ್ದರೆ ಬೇರೆ ಬೇರೆ ಕೊಡುವಂಥಾದ್ದು ಸಚಿವ ಸಂಪುಟದ ಮುಂದಿದೆ. ಇದಕ್ಕೆ ಅದು ಅಪ್ಲೈ ಆಗುವುದಿಲ್ಲ. ಎಸ್ಕಲೇಷನ್ ವರದಿ ಪ್ರಕಾರ ಅದನ್ನು ಕೊಡುವಂಥಾದ್ದು. ಶಿವಮೊಗ್ಗ, ಚಾಮರಾಜನಗರ ಇನ್ನು 18 ಈ ರೀತಿಯಾದಂಥಾದ್ದು ಏನು ಇವೆ ಅದೇ ಬೇರೆ ಪ್ರಶ್ನೆ.

3) ತಡೆಹಿಡಿಯಲಾದ ಪ್ರಶ್ನೆಗಳು.

ವಿಷಯ:- ಮೈಸೂರು ನಗರಪಾಲಿಕೆ ವತಿಯಿಂದ ಕಾಂಪ್ಲೆಕ್ಸ್ ನಿರ್ಮಾಣ.

214 (1141) ಶ್ರೀ ಎ. ರಾಮದಾಸ್ (ಕೃಷ್ಣರಾಜ):- ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮೈಸೂರು ನಗರ ಪಾಲಿಕೆ ವತಿಯಿಂದ ನಿರ್ಮಾಣ ಮಾಡಲು ಉದ್ದೇಶಿಸಿರುವ ಮಯೂರ ಕಾಂಪ್ಲೆಕ್ಸ್ ಎಂದು ಪ್ರಾರಂಭವಾಯಿತು? ಎಷ್ಟು ಖರ್ಚಾಗಿದೆ? ಇದರ ಅಂದಾಜು ವೆಚ್ಚವೆಷ್ಟು?

ಆ) ಈಗ ಈ ಕಾಮಗಾರಿಯು ಯಾವ ಹಂತದಲ್ಲಿದೆ, ಈ ಕಾಮಗಾರಿಯನ್ನು ಯಾವ ಕಂಟ್ರಾಕ್ಟರಿಗೆ ನೀಡಲಾಗಿತ್ತು? ಈ ಯೋಜನೆಗೆ ಸಾಲ ಪಡೆಯಲಾಗಿತ್ತೆ? ಎಷ್ಟು ಸಾಲ ಪಡೆಯಲಾಗಿದೆ? ಎಷ್ಟು ವಾರ್ಷಿಕ ಬಡ್ಡಿ ನೀಡಲಾಗುತ್ತಿದೆ?

ಶ್ರೀ ಮೀರಾಜುದ್ದೀನ್ ಎನ್. ಪಾಟೀಲ್ (ಪೌರಾಡಳಿತ ರಾಜ್ಯ ಸಚಿವರು):-

ಅ) ದಿನಾಂಕ 28-5-1988 ರಂದು ಪ್ರಾರಂಭವಾಗಿದ್ದು 25 ಲಕ್ಷ ರೂ. ಗಳು ಖರ್ಚಾಗಿದೆ. ಇದರ ಅಂದಾಜು ವೆಚ್ಚ ರೂ. 275 ಲಕ್ಷಗಳು.

ಆ) ಅಡಿಪಾಯ ಪೂರ್ಣಗೊಂಡಿದ್ದು, ಪಿಲ್ಲರ್‌ಗಳು ಅರ್ಧ ಮಟ್ಟಕ್ಕೆ ಬಂದಿವೆ. ಖೋಡೇಸ್ ಇಂಜಿನಿಯರಿಂಗ್ ಕಂಪನಿರವರಿಗೆ ಗುತ್ತಿಗೆ ನೀಡಲಾಗಿತ್ತು. ರೂ. 39.23 ಲಕ್ಷ ಸಾಲ ಪಡೆಯಲಾಗಿದ್ದು, ಸಾಲವನ್ನು ಸಂಪೂರ್ಣವಾಗಿ ಹುಡ್ಕೋಗೆ ಮರುಪಾವತಿ ಮಾಡಲಾಗಿದೆ. ಅದಕ್ಕೆ ಒಟ್ಟು ರೂ. 5.71 ಲಕ್ಷ ಬಡ್ಡಿ ಕೊಡಲಾಗಿದೆ.

ಶ್ರೀ ಎ. ರಾಮದಾಸ್:- ಅವತ್ತೂ ಕೂಡ ಇದೇ ಉತ್ತರ ಬಂದಿತ್ತು. ಪ್ರಮುಖವಾಗಿ ಏಕೆ ಈ ಕೆಲಸವನ್ನು ಅರ್ಧಕ್ಕೆ ನಿಲ್ಲಿಸಿದ್ದಿರಿ? 8 ವರ್ಷದಿಂದ ಪ್ರಾರಂಭವಾದಂತಹ ಈ ಕಾಂಪ್ಲೆಕ್ಸ್ ಮುಗಿಯುವುದು ಯಾವಾಗ? ಇದಕ್ಕೆ ಈಗ ತಗಲುವ ವೆಚ್ಚ ಎಷ್ಟು? ಕೋಡೇಸ್‌ನವರಿಗೆ ಕೊಟ್ಟಂಥ ಮುಂಗಡ ಹಣ ಎಷ್ಟು? ಆ ಹಣ ಈಗ ಏನಾಯಿತು? ಕಂಟ್ರಾಕ್ಟರ್ ಮೇಲೇನು ಕ್ರಮ ಕೈಗೊಂಡಿದ್ದೀರಿ? ಈ ಹಣ ರೆಕವರಿ ಮಾಡುವುದಕ್ಕೆ ಯಾವ ಕ್ರಮ ತೆಗೆದುಕೊಂಡಿದ್ದೀರಿ? ಮೂರನೆಯದಾಗಿ ಕಂಟ್ರಾಕ್ಟರಿಗೆ ಹಣವನ್ನು ಕೆರಾಟ್ಟು, ಪ್ರತಿ ವರ್ಷ 5.71 ಲಕ್ಷ ಹಣವನ್ನು ಬಡ್ಡಿಯ ರೂಪದಲ್ಲಿ ನಾವು ಕೊಡುತ್ತಿದ್ದೇವೆಂದು ಹೇಳಿರುವಂಥಾದ್ದು ಇದೆ. ಟ್ಯಾಕ್ಸ್ ಪೇಯರ್ಸ್ ಹಣವನ್ನು ಈ ರೀತಿಯಲ್ಲಿ ಬಡ್ಡಿ ರೂಪದಲ್ಲಿ ಕೊಡುವುದು ಎಷ್ಟು ಸೂಕ್ತವೆಂದು ನಾನು ಪ್ರಶ್ನೆ ಕೇಳಿದ್ದೆ.

ಶ್ರೀ ಮಿರಾಜುದ್ದಿನ್ ಎನ್. ಪಟೇಲ್:- ಮಯೂರ ಕಾಂಪ್ಲೆಕ್ಸ್‌ನ್ನು ಕಟ್ಟಲು ಮೈಸೂರು ಸಿಟಿ ಕಾರ್ಪೊರೇಷನ್ ವರ್ಕ್ ಆರ್ಡರ್ ಇಷ್ಯೂ ಮಾಡಿದ ದಿನಾಂಕ 11-5-88. ಇದರ ಟೋಟಲ್ ಅಂದಾಜು ಒರಿಜಿನಲ್ ಕಾಸ್ಟ್ 187.33 ಲಕ್ಷ ರೂ.ಗಳು ಮೆ. ಖೋಡೇಸ್ ಎಂಜಿನಿಯರಿಂಗ್ ಕಂಪನಿಗೆ ಟೆಂಡರ್ ಸಿಕ್ಕಿದೆ ಖೋಡೇ ಇಂಜಿನಿಯರಿಂಗ್ ಕಂಪನಿ ಕೆಲಸ ಪ್ರಾರಂಭ ಮಾಡಿದ್ದುದು 28–5–88ರಲ್ಲಿ. ಈ ಖೋಡೇಸ್ ಇಂಜಿನಿಯರಿಂಗ್ ಕಂಪನಿ 18 ತಿಂಗಳಲ್ಲಿ ಈ ಕೆಲಸ ಪೂರ್ತಿ ಮಾಡಬೇಕೆಂದು ಅಗ್ರಿಮೆಂಟ್ ಆಗಿತ್ತು. ಆ 18 ತಿಂಗಳಲ್ಲಿ ಕೆಲಸ ಪೂರ್ತಿ ಮಾಡಿಲ್ಲ. ಫೌಂಡೇಶನ್ ಲೆವೆಲ್ ಮತ್ತು ಹಾಫ್ ಪಿಲ್ಲರ್ ಲೆವೆಲ್ ಕೆಲಸ ಮಾಡಿದ್ದಾರೆ. ಒಟ್ಟು 25 ಲಕ್ಷ ರೂ.ಗಳ ಕೆಲಸ ಇದೆ. ಒಟ್ಟು 25 ಲಕ್ಷ ರೂಗಳ ಪೂರ್ತಿ ಕೆಲಸಕ್ಕೆ ಮೆ. ಖೋಡೇ ಇಂಜಿನಿಯರಿಂಗ್ ಕಂಪನಿಗೆ ಪೇಮೆಂಟ್ ಆಗಿದೆ. 18 ತಿಂಗಳಲ್ಲಿ ಅವರು ಅಂದರೆ ಅಗ್ರಿಮೆಂಟ್ ಪ್ರಕಾರ ಕೆಲಸ ಮಾಡಲಿಲ್ಲವೆಂದು 7–11–88 ಕ್ಕೆ ಅವರ ಟೆಂಡರ್ ಕೊಟ್ಟಿದ್ದನ್ನು ಕ್ಯಾನ್ಸಲ್ ಮಾಡಿದೆ. ಆನಂತರ ಆ ಕಾರ್ಪೋರೇಷನ್ ಮತ್ತೊಂದು ರೆಸಲ್ಯೂಷನ್ ಪಾಸ್ ಮಾಡಿ 29–12–92ಕ್ಕೆ ಬೇರೆ ಟೆಂಡರ್ ಕಾಲ್ ಮಾಡಿದರು. ಆ ಹೊಸ ಟೆಂಡರಿನಲ್ಲಿ ಬಿ.ಎಂ. ಪ್ರಸನ್ನಕುಮಾರ್ ಎನ್ನುವವರಿಗೆ ಆ ಟೆಂಡರ್ ಫೈನಲ್ ಆಗಿದೆ. ಬಿ.ಎಂ. ಪ್ರಸನ್ನ ಕುಮಾರ್ ಆವರಿಗೆ ಎಸ್ಟಿಮೇಟ್ ಕಾಸ್ಟ್ 254 ಲಕ್ಷ ರೂ.ಗಳು ಇತ್ತು. ಪ್ರಸನ್ನಕುಮಾರ್ ಮತ್ತು ನಗರಸಭೆ ಮಧ್ಯೆ 90 ದಿವಸದಲ್ಲಿ ಕೆಲಸ ಪ್ರಾರಂಭ ಮಾಡಬೇಕೆಂದು ಒಂದು ಅಗ್ರಿಮೆಂಟ್ ಆಗಿತ್ತು. ಆದರೆ 90 ದಿವಸದಲ್ಲಿ ಸರಕಾರದಿಂದ ಅಪ್ರೂವಲ್ ಸಿಗಲಿಲ್ಲ. ಅದಕ್ಕೆ ಟೆಂಡರ್ ಕ್ಯಾನ್ಸಲ್ ಆಯಿತು. ಮೈಸೂರು ಕಮಿಷನರ್ ಅವರು 22–5–95ಕ್ಕೆ ಬೇರೆ ಹೊಸದಾಗಿ ಟೆಂಡರ್ ಕಾಲ್ ಮಾಡಬೇಕೆಂದು ಸರಕಾರಕ್ಕೆ ಒಂದು ಅಪ್ರೂವಲ್ ಸಲುವಾಗಿ ಕಳಿಸಿದರು. ಅದು ಇಲ್ಲಿ ಪೆಂಡಿಂಗ್ ಇದೆ. 90 ದಿವಸ ಇದ್ದುದ್ದು ಏಕೆ ಇದು ಡಿಲೇ ಆಯಿತು ಎಂದು ಕ್ಲಾರಿಫಿಕೇಷನ್‌ಗೆಂದು ಇಲಾಖೆಗೆ ಹೋಗಿದೆ; ಅಲ್ಲಿಂದ ಇನ್ನೂ ಕ್ಲಾರಿಫಿಕೇಷನ್ ಬಂದಿಲ್ಲ. ಪ್ರಸನ್ನಕುಮಾರ್, 96 ಎಸ್.ಆರ್. ಪ್ರಕಾರ ನಮಗೆ ಆ ಕೆಲಸ ಕೊಟ್ಟರೆ ನಾವು ಮಾಡುತ್ತೇವೆಂದು ತಿಳಿಸಿದ್ದಾರೆ. ಅದಕ್ಕೆ ರಿವೈಸ್ಡ್ ಎಸ್ಟಿಮೇಟ್ ಒಂದು ಕೋಟಿ 45 ಲಕ್ಷ ರೂ.ಗಳಷ್ಟು ಇನ್ನು ಜಾಸ್ತಿಯಾಗುತ್ತದೆ. ಫೌಂಡೇಷನ್ ಮತ್ತು ಹಾಫ್ ಪಿಲ್ಲರ್ ಲೆವೆಲ್ ಆಗಿ 7 ವರ್ಷವಾಗಿದೆ. ನ್ಯಾಷನಲ್ ಇನ್ಸ್‌ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಫೌಂಡೇಷನ್‌ನವರಿಗೆ

ಆದೇ ಇರಬೇಕೇ ಅಥವಾ ಇಲ್ಲವೆ ಬದಲಾವಣೆ ಮಾಡಬೇಕೇ ಎಂದು ವರದಿಯನ್ನು ಕಾರ್ಪೋರೇಷನ್ನಿನಿಂದ ಕೇಳಿದ್ದೇವೆ.

1.40 ಪಿ.ಎಂ.

ಇಲ್ಲಿ 90 ದಿನಗಳು ಏತಕ್ಕೆ ಡಿಲೇ ಆಯಿತು, ಅದಕ್ಕೆ ಏನು ಕಾರಣ, ಯಾರು ಇದಕ್ಕೆ ಜವಾಬ್ದಾರರು ಎಂದು ಹೇಳಿ ಕ್ಲಾರಿಫಿಕೇಷನ್ ಕೇಳಿದ್ದೆವೆ. ಆಮೇಲೆ ಆ ಕ್ಲಾರಿಫಿಕೇಶನ್‌ಗೆ ಉತ್ತರ ಬಂದಾಗ ಆದನ್ನು ನೋಡಿ ಫರ್ದರ್ ನಾನು ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಎ. ರಾಮದಾಸ್:- ಮಾನ್ಯ ಅಧ್ಯಕ್ಷರೇ, ಅವತ್ತು ತಮ್ಮನ್ನು ಕೇಳುವ ಸಮಯದಲ್ಲಿ ಒಂದು ವಿಚಾರದಲ್ಲಿ ತಾವು ಹೇಳಿದಿರಿ, ಫೌಂಡೇಷನ್ ವರ್ಕ್ ಆಗಿದೆ, ಅಲ್ಲಿ ಈಗಾಗಲೇ ಪಿಲ್ಲರ್‌ಗಳು ಅರ್ಧ ಮಟ್ಟಕ್ಕೆ ಬಂದಿದೆ ಎನ್ನುವ ವಿಚಾರ ಬಂತು. ಈಗ ಮಾನ್ಯ ಸಚಿವರು ಉತ್ತರ ಹೇಳುತ್ತಾ ಹೇಳಿದ್ದಾರೆ, ಇಂಜಿನಿಯರಿಂಗ್ ಡಿಪಾರ್ಟ್‌ಮೆಂಟಿಗೆ ಈಗಾಗಲೇ ವಹಿಸಲಾಗಿದೆ. ಅಲ್ಲಿ ಹಾಕಿರುವ ಫೌಂಡೇಷನನ್ನು ತೆಗೆದುಹಾಕಬೇಕೇ ಎನ್ನುವುದರ ಬಗ್ಗೆ ಕ್ಲಾರಿಫಿಕೇಷನ್ಸ್ ಇದೆ ಎಂದು ಹೇಳಿ. ಅಲ್ಲಿ ಫೌಂಡೆಷನ್ ಇಲ್ಲ ಎಂದು ಹೇಳಿದ್ದರಿಂದ 39 ಲಕ್ಷ ರೂಪಾಯಿಗಳನ್ನು ಪೇ ಮಾಡಲಾಗಿದೆ. ಸಿಮೆಂಟ್ ಮತ್ತು ಸ್ಟೀಲ್ ಏನನ್ನು ಖೋಡೇಸ್‌ನವರಿಗೆ ಕೊಟ್ಟರು, ಅದನ್ನು ರಿಕವರಿ ಮಾಡಲಿಲ್ಲ. ಅದು ಸಮಸ್ಯೆಯಾಗಿ ಹಾಗೆಯೇ ಆದೇ ರೀತಿಯಲ್ಲಿ ಉಳಿದಿದೆ. ಇವತ್ತು ಕೂಡ ಫೌಂಡೇಶನ್ ತೆಗೆದು ಹಾಕಬೇಕೇ; ಹೇಗೆ ಎನ್ನುವುದರ ಬಗ್ಗೆ ಮಂತ್ರಿಗಳು ಹೇಳಿದರು. ಈ ವಿಚಾರದಲ್ಲಿ ಆ ಕಂಪನಿಯನ್ನು ಬ್ಲಾಕ್‌ಲಿಸ್ಟ್‌ಗೆ ಸೇರಿಸಿದ್ದಾರೋ? ಅದರ ಬಗ್ಗೆ ರಿಕವರಿ ಮಾಡದೇ 5.71 ಲಕ್ಷ ರೂಪಾಯಿಗಳನ್ನು ಪ್ರತಿವರ್ಷ ಬಡ್ಡಿಯ ರೂಪದಲ್ಲಿ ಟ್ಯಾಕ್ಸ್ ಪೇಯರ್ಸ್ ಹಣವನ್ನು ಕಟ್ಟುತ್ತಿರುವುದಕ್ಕೆ ಸಮಸ್ಯೆಯೇನು ಎಂದು ಕೇಳುತ್ತಿದ್ದೇವೆ.

ಶ್ರೀ ಮಿರಾಜುದ್ದೀನ್ ಎನ್. ಪಟೇಲ್:- ಮಾನ್ಯ ಅಧ್ಯಕ್ಷರೇ, ಖೋಡೇಸ್ ಇಂಜಿನಿಯರಿಂಗ್ ಕಂಪನಿ 25 ಲಕ್ಷ ರೂಪಾಯಿಗಳ ಕೆಲಸವನ್ನು ಮಾಡಿದ್ದರು. ಅವರು ಎಷ್ಟು ಕೆಲಸ ಮಾಡಿದ್ದಾರೋ ಅಷ್ಟೇ ಪೇಮೆಂಟ್ ಮಾಡಿದ್ದೇವೆ. 25 ಲಕ್ಷ ರೂಪಾಯಿಗಳನ್ನು ಲೋನ್ ತೆಗೆದುಕೊಂಡಿದ್ದುದು. 5.71 ಲಕ್ಷ ರೂಪಾಯಿಗಳು ಏನಿದೆ, ಅದನ್ನು ವಿತ್ ಇಂಟರೆಸ್ಟ್ ರೀಪೇಮೆಂಟ್ ಮಾಡಿದ್ದೇವೆ. ಖೋಡೆಸ್ ನವರಿಂದ 25 ಲಕ್ಷ ರೂಪಾಯಿಗಳ ಕೆಲಸವಾಗಿದ್ದು ಅಷ್ಟೇ ಪೇಮೆಂಟ್ ಮಾಡಿದ್ದೇವೆ. ಅದಕ್ಕಿಂತ ಜಾಸ್ತಿ ಮಾಡಿಲ್ಲ.

ಶ್ರೀ ಎ. ರಾಮದಾಸ್:- ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಸಚಿವರಲ್ಲಿ ನನ್ನ ಪ್ರಶ್ನೆ ಇಷ್ಟೆ. ಕೆಲಸ ಆಗಿರುವುದರಲ್ಲಿ ಕಳಪೆ ಕೆಲಸವಾಗಿದೆ. ಮತ್ತು ಅಲ್ಲಿ ಯಾವುದೇ ರೀತಿಯಾಗಿ ಕೆಲಸ ಕೂಡೆ ಆಗಿಲ್ಲ. ಇಂಜಿನಿಯರ್ ರಿಪೋರ್ಟ್‌ನ್ನು ನೀವು ಈಗಾಗಲೇ ಕೇಳಿದ್ದೀರಿ. ಅದರೆ ಖೋಡೇಸ್‌ನವರಿಗೆ ಪೇಮೆಂಟ್ ಮಾಡಿರುವುದರ ಬಗ್ಗೆ ರಿಕವರಿ ಬಗ್ಗೆ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ನೀವು ಕೊಟ್ಟಂಥ

5.71 ಲಕ್ಷ ರೂಪಾಯಿಗಳನ್ನು ಏನು ಬಡ್ಡಿಯನ್ನು ಪ್ರತಿ ವರ್ಷ ಕೊಡುತ್ತಿದ್ದೀರಿ, ಈ ಹಣ ಏನು ಇದೆ, ಇದು ಟ್ಯಾಕ್ಸ್ ಪೇಯರ್ಸ್ ಹಣ, ಕೆಲಸವಾಗಿಲ್ಲದಿದ್ದರೂ ಹಣ ಕೊಡುತ್ತಿರುವುದು ಎಷ್ಟು ಔಚಿತ್ಯ ಇದರ ಬಗ್ಗೆ ಕ್ರಮ ಏನು ಎಂದು ನಾನು ಕೇಳುತ್ತಿದ್ದೇನೆ.

ಶ್ರೀ ಮಿರಾಜುದ್ದೀನ್ ಎನ್. ಪಟೇಲ್:- ಅಲ್ಲಿ ಅವರು 25 ಲಕ್ಷ ರೂಪಾಯಿಗಳ ಕೆಲಸವನ್ನು ಮಾಡಿದ್ದರು. ಅಷ್ಟು ನಾವು ಪೇಮೇಂಟ್ ಮಾಡಿದ್ದೇವೆ ಎಂದು ನಮ್ಮ ಹತ್ತಿರ ವರದಿ ಇದೆ. ಈಗ ತಾವು ಫೌಂಡೇಶನ್ ಸರಿಯಾಗಿಲ್ಲ, ಅಷ್ಟು ಕರೆಕ್ಟ್ ಆಗಿ ಕೆಲಸ ಆಗಿಲ್ಲ ಎಂದರೆ ಅದರ ಬಗ್ಗೆ ಎನ್‌ಕ್ವೈರಿ ಮಾಡಿಸಿ ರಿಪೋರ್ಟ್ ತರಿಸಿ ತಮಗೆ ಉತ್ತರವನ್ನು ಕಳುಹಿಸಿಕೊಡುತ್ತೇನೆ.

ಶ್ರೀ ಸಿ.ಎಸ್. ಸಗೀರ್ ಅಹಮದ್:- ಮಾನ್ಯ ಅಧ್ಯಕ್ಷರೇ ಮೈಸೂರು ಪಟ್ಟಣದಲ್ಲಿ ಬರುತ್ತಿರುವ ಈ ಸಂಕೀರ್ಣ ಕಟ್ಟಡ ಏನು ಇದೆ, ಇದನ್ನು ಖೋಡೇಸ್‌ನವರಿಗೆ ಬಹಳ ಹಿಂದೆಯೇ ಗುತ್ತಿಗೆಯ ಆಧಾರದ ಮೇಲೆ ನೀಡಿದ್ದಾರೆ. ನಾನೂ ವೀಕ್ಷಣೆ ಮಾಡಿದ್ದೇನೆ. ಖೋಡೇಸ್‌ನವರು ನ್ಯಾಯಾಲಯದಲ್ಲಿ ಮೊಕದ್ದಮೆಯನ್ನು ಹೂಡಿದ್ದಾರೆ ಏಕೆಂದರೆ ನನಗೆ ಈ ಗುತ್ತಿಗೆಯನ್ನು ಕೊಟ್ಟಿರುವ ಸಂದರ್ಭದಲ್ಲಿ ಇದರ ಅಂದಾಜು ವೆಚ್ಚವನ್ನು ತಯಾರುಪಡಿಸಿರುವ ಸಂದರ್ಭದಲ್ಲಿ ವಾರ್ಷಿಕ ಷೆಡ್ಯೂಲ್ ರೇಟ್ಸ್ ಏನೇನು ಇರುತ್ತದೆ, ಅದು ಹೆಚ್ಚು ಕಡಿಮೆಯಾಗಿರುವುದರಿಂದ ಇನ್ನು ಈ ಕಟ್ಟಡವನ್ನು ಮುಂದುವರೆಸಬೇಕಾದ ಪಕ್ಷದಲ್ಲಿ ನನಗೆ ಹೊಸ ಷೆಡ್ಯೂಲ್ ರೇಟನ್ನು ಕೊಟ್ಟಾಗ ಮಾತ್ರ ನಾನು ಈ ಕಟ್ಟಡದ ಕೆಲಸವನ್ನು ಪ್ರಾರಂಭ ಮಾಡುತ್ತೇನೆ ಎಂದು ಹೇಳಿ ಅವರು ನ್ಯಾಯಾಲಯಕ್ಕೆ ಅರ್ಜಿಯನ್ನು ಹಾಕಿಕೊಂಡಿದ್ದಾರೆ. ಹೀಗಿರುವಾಗ ಇವರು ಬೇರೆಯವರಿಗೆ ಕೊಡುತ್ತೇವೆ ಅದರ ಅಂದಾಜು 1 ಕೋಟಿ 40 ಲಕ್ಷ ರೂ. ಗಳು ಹೇಗೆ ಆಗಿದೆ ಎಂದು ಹೇಳಿದರೆ ನ್ಯಾಯಾಲಯದ ತೀರ್ಪು ಬರದೇ ಇರುವುದರಿಂದ ಇವರು ಹೇಗೆ ಕೆಲಸವನ್ನು ಪ್ರಾರಂಭ ಮಾಡುತ್ತಾರೆ ಎನ್ನುವುದು ಒಂದೇ ಒಂದು ಪ್ರಶ್ನೆ.

ಶ್ರೀ ಮಿರಾಜುದ್ದೀನ್ ಎನ್. ಪಟೇಲ್:- ಖೋಡೇಸ್ ಇಂಜಿನಿಯರಿಂಗ್ ಕಂಪನಿಗೂ ಮತ್ತು ಕಾರ್ಪೋರೇಷನ್ ಇಂಜಿನಿಯರಿಂಗ್ ಏಜೆನ್ಸೀಸ್‌ಗೆ ಇಬ್ಬರಿಗೂ 18 ತಿಂಗಳಲ್ಲಿ ಇದನ್ನು ಕಟ್ಟಬೇಕೆಂದು ಹೇಳಿ ಅಗ್ರಿಮೆಂಟ್ ಆಗಿತ್ತು.

ಅಧ್ಯಕ್ಷರು:- ಮಾನ್ಯ ಮಿರಾಜುದ್ದೀನ್‌ರವರೇ, ಇನ್ನು ಮುಂದಕ್ಕೆ ಈ ರೀತಿಯ ಸಮಸ್ಯೆಗಳು ಬಂದಾಗ ಆವರ ಗೈಡೆನ್ಸ್ ತೆಗೆದುಕೊಂಡು ಮಾಡಿ.

ಶ್ರೀ ಮಿರಾಜುದ್ದೀನ್ ಎನ್. ಪಟೇಲ್:- ಹೇಳುತ್ತೇನೆ. ಆಸ್ ಪರ್ ಅಗ್ರಿಮೆಂಟ್ ಅವರು ಕೆಲಸ ಮಾಡಲಾರದ ಕಾರಣ ಟೆಂಡರನ್ನು ರದ್ದುಮಾಡಿ ಬೇರೆ ಫ್ರೆಷ್ ಟೆಂಡರನ್ನು ಕರೆಯಬೇಕು ಎಂದು ಆಗ ನಾವು ಕಾರ್ಪೊರೇಷನ್‌ನವರು ತೀರ್ಮಾನ ತೆಗೆದುಕೊಂಡರು. ಅವರು 18 ತಿಂಗಳಲ್ಲಿ ನಮ್ಮ ಅಗ್ರಿಮೆಂಟ್ ಪ್ರಕಾರ ಮಾಡಿದ್ದರೆ ನಾವೇಕೆ ಆ ಟೆಂಡರನ್ನು ರದ್ದುಮಾಡುತ್ತಿದ್ದೆವು? ಇಲ್ಲಿ ಅವರ ತಪ್ಪು ಇದೆ.

ಶ್ರೀ ಎ. ರಾಮದಾಸ್:- ಯಾವಾಗ ಕೆಲಸ ಪ್ರಾರಂಭ ಮಾಡುತ್ತೀರಿ? ಸುಮಾರು ಎಂಟು ವರ್ಷಗಳ ಕಾಲದಿಂದ ಹಾಗೆಯೇ ಉಳಿದಿದೆ. ಕೆಲಸವನ್ನು ಯಾವಾಗ ಪ್ರಾರಂಭ ಮಾಡುತ್ತೀರಿ? ಹಣ ರಿಕವರಿ ಬಗ್ಗೆ ಏನಾದರೂ ಕ್ರಮ ತೆಗೆದುಕೊಳ್ಳುತ್ತಿರೋ?

ಶ್ರೀ ಮಿರಾಜುದ್ದೀನ್ ಎನ್. ಪಟೇಲ್:- ಅತೀ ಶೀಘ್ರದಲ್ಲಿಯೇ ಅದರ ಬಗ್ಗೆ ಒಂದು ತೀರ್ಮಾನವನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಎ. ರಾಮದಾಸ್:- ಶೀಘ್ರ ಎನ್ನುವುದು ಬೇಡ, ಯಾವಾಗ ಕೆಲಸ ಪ್ರಾರಂಭ ಮಾಡುತ್ತೀರಿ? ಏಕೆಂದರೆ ಎಂಟು ವರ್ಷಗಳ ಕಾಲದಿಂದ ಉಳಿದಿರುವಂಥದ್ದು. ಒಂದು ಡೀಕೇಡ್ ಆಗುತ್ತಾ ಇದೆ.

ಅಧ್ಯಕ್ಷರು:- ರಾಮದಾಸ್‌ರವರೇ, ಕೆಲಸವಾಗಲಿ ಬಿಡಲಿ, ಅವರು ಹೇಳಿದ್ದಕ್ಕೆ ನೀವು ಖುಷಿ ಪಡಬೇಕು.

4) ಅಲ್ಪ ಕಾಲಾವಧಿ ಪ್ರಶ್ನೆ

ವಿಷಯ:- ತುಮಕೂರಿನ ಬಳಿ ಸ್ಟಾರ್ ಟಿ.ವಿ.ಗಾಗಿ ಸರ್ಕಾರಿ ಜಮೀನು ಮಂಜೂರು.

1 (5) **ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೆಪಲ್ಲಿ):-** ಮಾನ್ಯ ವಾರ್ತಾ ಮತ್ತು ಪ್ರಚಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ತುಮಕೂರಿನ ಬಳಿ ಸ್ಟಾರ್ ಟಿ.ವಿ.ಯನ್ನು ಆಪ್‌ಲಿಂಕ್ ಮಾಡುವ ಸಲುವಾಗಿ ಶ್ರೀ ರೂಪರ್ಟ್ ಮರ್ಡೋಕ್‌ರವರಿಗೆ 5,000 ಎಕರೆ ಭೂಮಿಯನ್ನು ಮಂಜೂರು ಮಾಡುವ ಪ್ರಯತ್ನ ನಡೆದಿರುವ ವಿಚಾರವು ಸರ್ಕಾರದ ಗಮನಕ್ಕೆ ಗೊತ್ತಿದೆಯೇ?

ಆ) ಒಂದು ವೇಳೆ ಸ್ಟಾರ್ ಟಿ.ವಿ. ಆಪ್‌ಲಿಂಕ್ ಮಾಡಲು ಸರ್ಕಾರವು ಭೂಮಿಯನ್ನು ಮಂಜೂರು ಮಾಡಿದ ವರ್ಷದಲ್ಲಿ ನಮ್ಮ ರಾಜ್ಯದ: ರಾಷ್ಟ್ರದ ಮೇಲೆ ದುಷ್ಪರಿಣಾಮ ಬೀರುವುದಿಲ್ಲವೇ?

ಶ್ರೀ ಎಂ.ಸಿ. ನಾಣಯ್ಯ (ವಾರ್ತಾ ಮತ್ತು ಪ್ರಚಾರ ಸಚಿವರು):-

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:- ಮಾನ್ಯ ಅಧ್ಯಕ್ಷರೇ, ರೂಪರ್ಟ್ ಮುರ್ಡೋಕ್‌ರವರು ಪ್ರಸಾರ ಮಾಧ್ಯಮದ ಒಬ್ಬ ಗುತ್ತಿಗೆದಾರರು. ಹಾಂಕಾಂಗ್‌ನಲ್ಲಿರತಕ್ಕಂಥ . . .

ಅಧ್ಯಕ್ಷರು:- ಪ್ರಶ್ನೆ ಕೇಳಿ ಅಷ್ಟೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:- ಪ್ರಶ್ನೆಯೇ ಅದು. ಕೇಳಿದ್ದೇನೆ ಎಂದು ಹೇಳಿದೆ.